ಪ್ರಜಾವಾಣಿ
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

**Saturday 6th April 2019, Page No.II**

## UPSC results: RVCE student Rahul 17th Rank

# ರಾಜ್ಯದ 24 ಮಂದಿ ಆಯ

## ಯುಪಿಎಸ್‌ಸಿ ಫಲಿತಾಂಶ ಪ್ರಕಟ: ಹುಬ್ಬಳ್ಳಿಯ ರಾಹುಲ್‌ಗೆ 17ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಪಿಎಸ್‌ಸಿ 2018 ರಲ್ಲಿ ನಡೆಸಿದ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಹುಬ್ಬಳ್ಳಿಯ ರಾಹುಲ್ ಶರಣಪ್ಪ ಸಂಕನೂರು 17 ನೇ ರ‍್ಯಾಂಕ್ ಪಡೆದಿದ್ದಾರೆ.

ಕರ್ನಾಟಕದ ಒಟ್ಟು 24 ಅಭ್ಯರ್ಥಿಗಳು ನಾಗರಿಕ ಸೇವೆಗೆ ಅರ್ಹತೆ ಪಡೆದಿದ್ದಾರೆ. ಭಾರತೀಯ ಆಡಳಿತ ಸೇವೆ, ಭಾರತೀಯ ವಿದೇಶಾಂಗ ಸೇವೆ, ಭಾರತೀಯ ಪೊಲೀಸ್ ಸೇವೆ, ಮತ್ತು ಇತರ ಕೇಂದ್ರ ಸೇವೆಗಳಿಗೆ ನೇಮಕ ಮಾಡಲಾಗುವುದು.

ರ‍್ಯಾಂಕ್ ವಿಜೇತರು ಮತ್ತು ಪಡೆದ ರ‍್ಯಾಂಕ್ : ಎನ್. ಲಕ್ಷ್ಮಿ (45), ಎಸ್. ಆಕಾಶ್ (78), ಕೃತಿಕಾ(100), ಎಚ್. ಆರ್ ಕೌಶಿಕ್ (240), ಎಚ್.ಬಿ. ವಿವೇಕ್ (257),ನಿವೇದಿತಾ(303), ಗಿರೀಶ್ ಧರ್ಮರಾಜ್ ಕಲಗೊಂಡ(307), ಮಿರ್ಜಾ ಕದರ್ ಬೇಗ್ (336),ಯು.ಪಿ ತೇಜಸ್ (338), ಬಿ.ಜೆ. ಹರ್ಷವರ್ಧನ್ (352), ಪಕೀರೇಶ್ ಕಲ್ಲಪ್ಪ ಬಾದಾಮಿ (372). ಡಾ. ನಾಗಾರ್ಜುನ ಗೌಡ (418), ಬಿ.ವಿ ಅಶ್ವಿಜಾ (423), ಆರ್. ಮಂಜುನಾಥ್ (495), ಎಸ್. ಬೃಂದಾ (496), ಹೇಮಂತ್(612), ಎಂ.ಕೆ ಶೃತಿ (637), ವೆಂಕಟರಾಮ್(694), ಸಂತೋಷ್ ಎಚ್(753), ಎಸ್. ಅಶೋಕ್ ಕುಮಾರ್ (711), ಎನ್. ರಾಘವೇಂದ್ರ(739) ಮತ್ತು ಶಶಿಕಿರಣ್(754) ರ‍್ಯಾಂಕ್ ಪಡೆದ ಅಭ್ಯರ್ಥಿಗಳು. ಈ 24 ಮಂದಿಯಲ್ಲಿ 17 ಮಂದಿ ರ‍್ಯಾಂಕ್ ವಿಜೇತರು ಡಾ.ರಾಜ್‌ಕುಮಾರ್ ಐಎಎಸ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ.



**ಉತ್ತಮ ಸಾಧನೆ ಮಾಡಿದ್ದಕ್ಕೆ ಸಂತೋಷವಾಗಿದೆ. ಕೆಲಸಕ್ಕೆ ರಾಜೀನಾಮೆ ಕೊಟ್ಟು ಒಂದು ವರ್ಷ ಕಷ್ಟಪಟ್ಟು ಓದಿದ್ದೇನೆ. ಮುಂದೆ ಜವಾಬ್ದಾರಿ ಹೆಚ್ಚಾಗುತ್ತದೆ**

**ಎನ್. ಲಕ್ಷ್ಮಿ**, ಬೆಂಗಳೂರು



**ಯುಪಿಎಸ್‌ಸಿ ಪರೀಕ್ಷೆ ಎಂಬುದು ವೇಗವಾಗಿ 100 ಮೀಟರ್ ಓಡಿ ವಿರಮಿಸುವುದಲ್ಲ. ಅದು ಮ್ಯಾರಥಾನ್ ಇದ್ದಂತೆ. ಯಶಸ್ಸು ಸಿಗುವ ತನಕ ನಿರಂತರವಾಗಿ ಓಡುತ್ತಲೇ ಇರಬೇಕು**

**ರಾಹುಲ್ ಶರಣಪ್ಪ ಸಂಕನೂರ**, ಹುಬ್ಬಳ್ಳಿ

### ಪಕ್ಕೀರೇಶ್‌ಗೆ 372ನೇ ರ‍್ಯಾಂಕ್

ಹುಬ್ಬಳ್ಳಿ: ಹುಬ್ಬಳ್ಳಿಯ ಪಕ್ಕೀರೇಶ್ ಬಾದಾಮಿ 372ನೇ ರ‍್ಯಾಂಕ್ ಗಳಿಸಿದ್ದಾರೆ. ಕಳೆದ ಬಾರಿಯೂ ಅವರು 269ನೇ ರ‍್ಯಾಂಕ್ ಪಡೆದು ಸಾಧನೆ ಮಾಡಿದ್ದರು. ಐಆರ್‌ಎಸ್ ಸೇವೆಗೆ ಆಯ್ಕೆಯಾಗಿ ನಾಗಪುರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

'ಕಳೆದ ಬಾರಿಗಿಂತ ರ‍್ಯಾಂಕಿಂಗ್ ಉತ್ತಮಗೊಳ್ಳಬಹುದು ಎಂಬ ಉದ್ದೇಶದಿಂದ ಮತ್ತೆ ಪರೀಕ್ಷೆ ಬರೆದಿದ್ದೆ. ಆದರೆ ಈ ಬಾರಿ ಹೆಚ್ಚಿನ ರ‍್ಯಾಂಕ್ ಬಂದಿಲ್ಲ. ಆದ್ದರಿಂದ ಈಗಿರುವ ಹುದ್ದೆಯಲ್ಲಿಯೇ ಮುಂದುವರಿಯುತ್ತೇನೆ' ಎಂದು ಪಕ್ಕೀರೇಶ್ 'ಪ್ರಜಾವಾಣಿ'ಗೆ ತಿಳಿಸಿದರು.